


ದೇವಸ್ಥಾನದ ಸುತ್ತಲೂ ಎಂಟು ಮಠಗಳನ್ನು ಸ್ಥಾಪಿಸಿದರು. ಶ್ರೀಕೃಷ್ಣನ ಆರಾಧನೆಯ ಹೊಣೆ ಹೊತ್ತು ಉಡುಪಿಯಲ್ಲಿ ಸ್ಥಾಪನೆಗೊಂಡ ಮಠಗಳೆಂದರೆ, (೧) **ಫಲಿಮಾರು ಮಠ (೨) ಅದಮಾರು ಮಠ (೩) ಕೃಷ್ಣಾಪುರದ ಮಠ (೪) ಪುತ್ತಿಗೆ ಮಠ (೫) ಶೀರೂರು ಮಠ (೬) ಸೋದೆ ಮಠ (೭) ಕಾಣಿಯೂರು ಮಠ** ಮತ್ತು **(೮) ಪೇಜಾವರ ಮಠ**. ಈ ಎಂಟು ಮಠಗಳನ್ನು 'ಅಷ್ಟಮಠಗಳು" ಎಂದು ಕರೆಯುತ್ತಾರೆ.

ಹಾಗೆಯೇ, ಪದ್ಮನಾಭತೀರ್ಥ, ನರಹರಿತೀರ್ಥ, ಮಾಧವ ತೀರ್ಥ, ಅಕ್ಷೋಭ್ಯತೀರ್ಥ ಎಂಬ ಶಿಷ್ಯರುಗಳಿಂದ ಸಂಪ್ರದಾಯ ಪ್ರಕಾರ ಕಾಲಕ್ರಮೇಣ ಈ ಕೆಳಗಿನ ಮಠಗಳು ಬೆಳೆದುಬಂದವು: (೧) ಮಂತ್ರಾಲಯ ಮಠ (೨) ಉತ್ತರಾದಿ ಮಠ (೩) ಸೋಸಲೆ ವ್ಯಾಸರಾಯ ಮಠ (೪) ಮುಳಬಾಗಿಲು ಮಠ (೫) ಮಜ್ಜಿಗೆಹಳ್ಳಿ ಮಠ (೬) ಕೊಡ್ಲಿ ಮಠ (೭) ಬಾಳಗಾರು ಮಠ (೮) ಭೀಮನಕಟ್ಟೆ ಮಠ ಮುಂತಾದವು.

ಆಚಾರ್ಯ ಮಧ್ವರು ವಿದ್ವಾಂಸರಿಗಾಗಿ ಸಂಸ್ಕೃತದಲ್ಲಿ ಅನೇಕ ಗ್ರಂಥಗಳನ್ನು ಬರೆದರು. ಅವು ಜನಸಾಮಾನ್ಯರಿಗೆ ಮುಟ್ಟುವಂತಿರಲಿಲ್ಲ. ಅದಕ್ಕಾಗಿ ಸ್ವತಃ ಸಂಗೀತಗಾರರಾಗಿದ್ದ ಆಚಾರ್ಯರು ತಿಳಿಯಾದ ಸಂಸ್ಕೃತದಲ್ಲಿ ಹಾಡುಗಬ್ಬಗಳನ್ನು ರಚಿಸಿದರು. ತಮ್ಮ ಶಿಷ್ಯರಿಂದ ಕನ್ನಡದಲ್ಲಿ ಕೀರ್ತನೆಗಳನ್ನು ಬರೆಯಿಸಿ ಭಾಗವತರ ಮೂಲಕ ಅವನ್ನು ಬಳಕೆಗೆ ತಂದರು. ಹೀಗೆ ಈ ಪರಂಪರೆ ಶ್ರೀ ನರಹರಿತೀರ್ಥರಿಂದ ಪ್ರಾರಂಭವಾಗಿ ಶ್ರೀ ಪಾದರಾಜರು, ಶ್ರೀ ವ್ಯಾಸತೀರ್ಥರು ಮತ್ತು ಶ್ರೀ ವಾದಿ ರಾಜರಿಂದ ಬೆಳೆಯಿತು. ಸ್ವತಃ ವೈಣಿಕರಾಗಿದ್ದ ಶ್ರೀ ರಾಘವೇಂದ್ರ ಸ್ವಾಮಿಗಳು ಇದನ್ನು ಮುಂದುವರಿಸಿದರು.

ಈ ಪರಂಪರೆಯೇ ಮುಂದೆ ಪುರಂದರದಾಸ, ಕನಕದಾಸ, ವಿಜಯದಾಸ, ಗೋಪಾಲದಾಸ, ಜಗನ್ನಾಥದಾಸರಂತಹ ಅನುಭಾವಿಗಳನ್ನು ಕನ್ನಡನಾಡಿಗೆ ನೀಡಿತು. ಹೆಳವನಕಟ್ಟೆ ಗಿರಿಯಮ್ಮನಂತಹ ಮಹಿಳೆಯರೂ ಈ ಪರಂಪರೆಯನ್ನು ಬೆಳಗಿದರು. ವೇದಸಂದೇಶವನ್ನು ಕನ್ನಡದಲ್ಲಿ ಬಿತ್ತರಿಸುವ ಈ ಪರಂಪರೆಯ ಮೂಲ ಸಂಘಟಕರು ಆಚಾರ್ಯ ಮಧ್ವರು. ಇವರಿಂದಲೇ ದಾಸಸಾಹಿತ್ಯದ ಗಂಗೆ ಕನ್ನಡದ ನೆಲದಲ್ಲಿ ಹರಿದು ಕನ್ನಡಸಾಹಿತ್ಯ ಇನ್ನಷ್ಟು ಶ್ರೀಮಂತವಾಯಿತು.

ಅವರ ಕೊಡುಗೆ ಇಷ್ಟಕ್ಕೆ ಮುಗಿಯಲಿಲ್ಲ. ಅನಕ್ಷರಸ್ಥರಾದ ಹಳ್ಳಿಯ ಜನರಿಗೂ ತಮ್ಮ ಸಂದೇಶ ಮುಟ್ಟಬೇಕು ಎಂದು ಮಧ್ವಾಚಾರ್ಯರು, ತಮ್ಮ ಶಿಷ್ಯ ನರಹರಿತೀರ್ಥರ ಮೂಲಕ ಭಾಗವತರಾಟ, ದಶಾವತಾರದ ಆಟ ಎಂದು ಹೆಸರಾದ ಬಯಲಾಟದ ಕಲಾಮಾಧ್ಯಮನ್ನು ಬಳಕೆಗೆ ತಂದರು. ಮುಂದೆ ಇದು ಆಂಧ್ರದ 'ಕೂಚುಪುಡಿ' ನೃತ್ಯದ ಬೆಳವಣಿಗೆಗೆ ಸ್ಫೂರ್ತಿ ನೀಡಿತು ಎಂದು ವಿದ್ವಾಂಸರು ಹೇಳುತ್ತಾರೆ.

ಹೀಗೆ ಮಧ್ವಾಚಾರ್ಯರು ತಮ್ಮ ಜೀವನದುದ್ದಕ್ಕೂ ಭಗವಂತನ ಗುಣಗಾನವನ್ನು ಮಾಡಿದರು. ಈ ಕಾರ್ಯಕ್ಕೆ ಎದುರಾದ ಅಡ್ಡಿ ಆತಂಕಗಳನ್ನು ಧೈರ್ಯದಿಂದ ಎದುರಿಸಿದರು. ಚಿಕ್ಕ ಹುಡುಗನಾಗಿದ್ದಾಗಲೇ ತಮ್ಮನ್ನು ಕಚ್ಚಲೆಂದು ಬಂದ ಕಾಳಿಂಗ ಸರ್ಪವನ್ನು ಕಾಲಿನಲ್ಲೇ ಹೊಸಕಿ ಹಾಕಿದ್ದ ಆಚಾರ್ಯರಿಗೆ ಭಯವೆಂದರೇನೆಂಬುದೇ ತಿಳಿಯದು. ಅವರು ಯಾವ ಆತಂಕಕ್ಕೂ ಎದೆಗೆಡಲಿಲ್ಲ, ಎಂದೂ ಇನ್ನೊಬ್ಬರಿಗೆ ತಲೆಬಾಗಲಿಲ್ಲ. ತಮ್ಮ ಜೀವನದ ಉದ್ದೇಶ ಅವರಿಗೆ ಸ್ಫುಟವಾಗಿ ತಿಳಿದಿತ್ತು. ಅದನ್ನು ಸಾಧಿಸುವ ಬಗೆಯೂ ತಿಳಿದಿತ್ತು. ಹೀಗೆ ಧೀರಸಂನ್ಯಾಸಿಯಾಗಿ ಬಾಳಿದರು. ತಮ್ಮ ಬಳಿ ಬಂದವರಿಗೂ ಧೈರ್ಯ ನೀಡಿ, ಭರವಸೆಯನ್ನು ತುಂಬಿದರು.

ಎಪ್ಪತ್ತೊಂಭತ್ತು ವರ್ಷಗಳ ಕಾಲದ ಸಾರ್ಥಕ ಬದುಕನ್ನು ಬಾಳಿ ಪಿಂಗಲ ಸಂವತ್ಸರದ (ಕ್ರಿ.ಶ. ೧೩೧೭) ಮಾಘ ಶುದ್ಧ ನವಮಿಯಂದು ತಮ್ಮೆಲ್ಲ ಶಿಷ್ಯರನ್ನೂ ಬೀಳ್ಕೊಟ್ಟು ಬದರಿಕಾಶ್ರಮಕ್ಕೆ ತೆರಳಿದರು. ಅನಂತರ ಅವರನ್ನು ಕಂಡವರಿಲ್ಲ ಎನ್ನುತ್ತಾರೆ. ಇಂದಿಗೂ ಈ ದಿನವನ್ನು 'ಮಧ್ವನವಮಿ' ಎಂದು ಕರೆದು, ಅವರ ಪುಣ್ಯತಿಥಿಯನ್ನಾಗಿ ಆಚರಿಸಲಾಗುತ್ತಿದೆ. ಇವರ ನಿರ್ಯಾಣದ ಬಗ್ಗೆ ಇನ್ನೊಂದು ಕಥೆಯೂ ಇದೆ. ಇವರು ಶಿಷ್ಯರಿಗೆ ಐತರೇಯ ಉಪನಿಷತ್ತನ್ನು ಬೋಧಿಸುತ್ತಿರುವಾಗ, ಇದ್ದಕ್ಕಿದ್ದಂತೆ ತಮ್ಮ ಆಸನದಿಂದ ಮಾಯವಾದರು. ಆ ಸ್ಥಳದಲ್ಲಿ ಒಂದು ದೊಡ್ಡ ಹೂವಿನ ರಾಶಿಯಿತ್ತು ಎನ್ನುತ್ತಾರೆ.

ಹೀಗೆ ದ್ವೈತಮತ ಸ್ಥಾಪಕರಾದ ಆಚಾರ್ಯ ಮಧ್ವರು ಅಧ್ಯಾತ್ಮಪ್ರಪಂಚದಲ್ಲಿ ಮೆರೆದು, ಎಲ್ಲರಿಗೂ ತತ್ತ್ವವಾದದ ಸವಿಯನ್ನು ಉಣಿಸಿದರು, ಧರ್ಮಕ್ಕೆ, ತತ್ತ್ವಕ್ಕೆ ಹೊಸ ಆಯಾಮವನ್ನು ನೀಡಿದರು; ವಿದ್ವತ್ ಪ್ರಪಂಚಕ್ಕೆ ಹೊಸ ಬೆಳಕನ್ನು ನೀಡಿದರು.




# ಸ್ವಾಮಿ ವಿವೇಕಾನಂದರು ನಿರೂಪಿಸಿದ ನೀತಿಕಥೆಗಳು



ಡಾ. ಕೆ. ಅನಂತರಾಮು

## ಕಂಬಳಿಹುಳು

ನಾವು ಈ ಜಗತ್ತಿಗೆ ತುಂಬಾ ಹಳಬರು. ನಾವು ಯಾವಾಗಲೂ ಇದ್ದೆವು. ಒಂದೊಂದು ಜನ್ಮದಲ್ಲಿಯೂ ನಮ್ಮ ಅದೃಷ್ಟವನ್ನು ನಾವೇ ರೂಪಿಸಿಕೊಂಡೆವು. ವಿಧಿಯೆಂಬುದು ಪ್ರತ್ಯೇಕವಾಗಿ ಇರುವಂಥದೇನಲ್ಲ. ಅದು ನಮ್ಮ ಪೂರ್ವಕರ್ಮಗಳ ಫಲವೇ ಆಗಿದೆ. ನಮ್ಮ ಕರ್ಮಗಳಿಗೆ ನಾವೇ ಜವಾಬ್ದಾರರು ಎಂಬುದು ನಿಶ್ಚಯವಾಗಿರುವುದರಿಂದ ಅದನ್ನು ನಿವಾರಿಸಿಕೊಳ್ಳುವುದೂ ನಮ್ಮ ಕೈಯಲ್ಲೇ ಇದೆ.




ಒಂದು ಕಂಬಳಿಹುಳು ತನ್ನ ದೇಹದ ದ್ರವ್ಯದಿಂದಲೇ ತನ್ನ ಸುತ್ತ ಒಂದು ಗೂಡನ್ನು ಹೆಣೆದುಕೊಂಡುಬಿಟ್ಟಿತು. ಅದರ ಫಲವಾಗಿ ಅದು ತನ್ನ ಗೂಡಿನೊಳಗೇ ಬಂಧನಕ್ಕೆ ಒಳಗಾಗಿಬಿಟ್ಟಿತು. "ಅಯ್ಯೋ ನಾನೇಕೆ ಹೀಗೆ ಮಾಡಿಕೊಂಡುಬಿಟ್ಟೆ" ಎಂದು ಅದು ಬೇಕಾದಷ್ಟು ಅತ್ತಿತು, ಕಿರುಚಾಡಿತು. "ಯಾರಾದರೂ ನನ್ನ ಸಹಾಯಕ್ಕೆ ಬನ್ನಿ" ಎಂದು ಗೋಳಿಟ್ಟಿತು. ಆದರೆ ಯಾರೂ ಅದರ ಸಹಾಯಕ್ಕೆ ಬರಲಿಲ್ಲ. ಆಗ ಅದು ತಾನೇ ತಾನಾಗಿ ಬಹಳ ಕಷ್ಟಪಟ್ಟು ತನ್ನ ಗೂಡನ್ನು ಸೀಳಿಕೊಂಡು ಹೊರಬಂದಿತು. ಅಷ್ಟು ಹೊತ್ತಿಗೆ ಅದೊಂದು ಸುಂದರವಾದ ಚಿಟ್ಟೆಯಾಗಿಬಿಟ್ಟಿತ್ತು.

ಕಂಬಳಿಹುಳುವಿನ ಕಥೆಯೇ ನಮ್ಮ ಜನನಮರಣಗಳ ಬಂಧನಕ್ಕೂ ಅನ್ವಯವಾಗುತ್ತದೆ. ಈಗ ಉಂಟಾಗಿರುವ ಬಂಧನದಿಂದ ನಾವೂ ದುಃಖಪಡುತ್ತಿದ್ದೇವೆ. ಆದರೆ ಸುಮ್ಮನೆ ದುಃಖಿಸಿದರೆ, ರೋದಿಸಿದರೆ ಏನೂ ಪ್ರಯೋಜನವಾಗುವುದಿಲ್ಲ, ಯಾರೂ ನಮ್ಮ ಸಹಾಯಕ್ಕೆ ಬರುವುದಿಲ್ಲ. ಈ ಬಂಧನವನ್ನು ಕಡಿದುಹಾಕಲು ನಾವೇ ಪ್ರಯತ್ನಿಸಬೇಕು. ಮಾನವನು ಸ್ವಭಾವತಃ ದುಷ್ಟನಲ್ಲ, ಪವಿತ್ರತೆಯೇ ಅವನ ಸ್ವರೂಪ. ಆ ಸ್ವರೂಪವು ಅಜ್ಞಾನದಿಂದ ಮುಚ್ಚಿಹೋಗಿದೆ. ಆ ಅಜ್ಞಾನವನ್ನು ಜ್ಞಾನವೆಂಬ ವಿಚಾರದ ಮೂಲಕ ನಿವಾರಿಸಿಕೊಳ್ಳಬೇಕು. ಸುಂದರವಾದ ಚಿಟ್ಟೆಯಾಗಿಬಿಡುವುದೇ ಹುಟ್ಟುಸಾವುಗಳಿಲ್ಲದ ಮೋಕ್ಷದ ಸ್ಥಿತಿ!

## ಮಕ್ಕಳ ಸ್ವಭಾವ

ನಮ್ಮದು ಮಕ್ಕಳ ಸ್ವಭಾವ. ಈ ಜಗತ್ತು ತುಂಬಾ ಸುಂದರವಾಗಿದೆ, ಭೋಗರಾಶಿಯು ನಮಗಾಗಿ ಕಾದು ಕುಳಿತಿದೆ ಎಂದು ನಾವು ಹಿಗ್ಗುತ್ತೇವೆ. ಇದು ಕೇವಲ ಶಾಲೆಯ ಮಕ್ಕಳ ಕನಸು. ಅವರು ಪ್ರಬುದ್ಧರಾಗಿ ಪ್ರಪಂಚವನ್ನು ಪ್ರವೇಶಿಸಿದಾಗ ಆ ಕನಸೆಲ್ಲ ಕರಗಿ ಹೋಗುತ್ತದೆ. ಈ ಜಗತ್ತಿನ ಪ್ರತಿಯೊಂದು ನಗರವೂ ಒಂದೊಂದು ಭಗ್ನಾವಶೇಷದ ಮೇಲೆಯೇ ಕಟ್ಟಲ್ಪಟ್ಟಿದೆ. ಈಗಿನ ಪ್ರತಿಯೊಂದು ಕಾಡೂ ಹಿಂದೊಂದು ನಗರವೇ ಆಗಿತ್ತು. ಇಂದಿನ ನಗರ ಮುಂದಿನ ಕಾಲಕ್ಕೆ ಭಗ್ನಾವಶೇಷವಾಗುತ್ತದೆ, ಇಂದಿನ ಕಾಡು ಮುಂದಿನ ಕಾಲಕ್ಕೆ ಒಂದು ನಗರವಾಗುತ್ತದೆ ಎಂಬುದನ್ನು ಮನುಷ್ಯನು ನೆಟ್ಟನೆ ಅರಿತಾಗ "ಈ ಜಗತ್ತಿನಲ್ಲಿ ಎಲ್ಲವೂ ವ್ಯರ್ಥ" ಎಂಬ ತಿಳಿವಳಿಕೆ ಅವನನ್ನು ಆಕ್ರಮಿಸಿಕೊಂಡುಬಿಡುತ್ತದೆ. ಅಂತಹ ತಿಳಿವಳಿಕೆ ಪಡೆಯಲು ಸಾಕಷ್ಟು ಶ್ರಮಿಸಬೇಕು.



ಒಬ್ಬ ಮಹಿಳೆ ಆಗಾಗ ಸ್ವಾಮಿ ವಿವೇಕಾನಂದರ ಸತ್ಸಂಗಕ್ಕೆ ಬರುತ್ತಿದ್ದಳು. ಅವಳ ಸಾಂಸಾರಿಕ ಮೋಹವಾದರೋ ಹೇಳತೀರದಷ್ಟು ಪ್ರಮಾಣದಲ್ಲಿತ್ತು. ತನ್ನ ಮಕ್ಕಳು, ತನ್ನ ಬಂಗಲೆ, ತನ್ನ ನಗನಾಣ್ಯಗಳು ಎಂದರೆ ಅವಳಿಗೆ ಪಂಚಪ್ರಾಣ. ಅವುಗಳಿಂದ ದೂರವಾಗಿರುವುದು ಅವಳಿಂದ ಸಾಧ್ಯವೇ ಇರಲಿಲ್ಲ. ಹೀಗಿರುವಾಗ ಅವಳು ಒಂದು ದಿನ ಸ್ವಾಮಿ ವಿವೇಕಾನಂದರನ್ನು ಕುರಿತು, "ಸ್ವಾಮಿ, ದೇವರನ್ನು ಪಡೆಯುವುದಕ್ಕೆ ಇರುವ ಮಾರ್ಗ ಯಾವುದು ಎಂಬುದನ್ನು ನನಗೆ ತಿಳಿಸಿಕೊಡಿ" ಎಂದು ಬೇಡಿಕೊಂಡಳು. ಆಗ ವಿವೇಕಾನಂದರು, "ನೋಡು ತಾಯೆ, ಮಕ್ಕಳುಮರಿಗಳು, ಮನೆ ಮಠಗಳು, ನಗನಾಣ್ಯಗಳು ಮುಂತಾದುವುಗಳನ್ನು ತ್ಯಜಿಸುವುದೇ ದೇವರನ್ನು ಪಡೆಯಲು ಇರುವ ಏಕೈಕ ಮಾರ್ಗ" ಎಂದು ಉಪದೇಶಿಸಿದರು. ಆ ಬೋಧನೆಯನ್ನು ಕೇಳಿದ ಮರುದಿವಸದಿಂದಲೇ ಆ ಮಹಿಳೆಯು ಸತ್ಸಂಗಕ್ಕೆ ಬರುವುದನ್ನು ನಿಲ್ಲಿಸಿಬಿಟ್ಟಳು. ಮತ್ತೆ ಅದೆಷ್ಟೋ